(ದಿನಾಂಕಃ 02.02.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ 4 ರವರ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದ ಃ-**

1. ನನ್ನ ತಂದೆ ಹೋಳಿಬಸಪ್ಪ ರವರು ಮರಣ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸರಿ. ನನ್ನ ತಾಯಿಯಾದ ಪ್ರತಿವಾದಿ 1 ರವರು ದಿನಾಂಕಃ 26.10.2024 ರಂದು ಈ ದಾವೆಯನ್ನು ದಾಖಲಿಸಿದ ನಂತರ ಮರಣ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸರಿ. ಪ್ರತಿವಾದಿ 3 ರವರ ಗಂಡ ಮತ್ತು ಪ್ರತಿವಾದಿ 3(ಎ) ಮತ್ತು ಪ್ರತಿವಾದಿ 3(ಬಿ) ರವರ ತಂದೆ ಮರಣ ಹೊಂದಿರುತ್ತಾರೆ ಎಂದು ಸೂಚಿಸಿದರೆ ಸರಿ.

2. ಪ್ರತಿವಾದಿ 2 ಮತ್ತು 5 ರವರು ನನ್ನ ಸಹೋದರಿಯರು ಎಂದು ಸೂಚಿಸಿದರೆ ಸರಿ. ಪ್ರತಿವಾದಿ 2 ರವರು ಸಾಗರದಲ್ಲಿ ವಾಸವಾಗಿರುತ್ತಾರೆ ಎಂದು ಸೂಚಿಸಿದರೆ ಸರಿ. ಪ್ರತಿವಾದಿ 5 ರವರು ಶಿವಮೊಗ್ಗದಲ್ಲಿ ವಾಸವಾಗಿರುತ್ತಾರೆ ಎಂದು ಸೂಚಿಸಿದರೆ ಸರಿ.

3. ನಮ್ಮ ಅಜ್ಜನ ಹೆಸರು ತಮ್ಮಣ್ಣ ಎಂದು ಸೂಚಿಸಿದರೆ ಸರಿ. ಅವರಿಗೆ ಮೂರು ಜನ ಗಂಡು ಮಕ್ಕಳಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜನಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4. ನಾನು ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಪ್ರಥಮ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

5. ನಾನು ನನ್ನ ಕಾಲೇಜ್ ಮುಗಿದಂತೆ ನಮ್ಮ ಅಣ್ಣನಾದ ಪ್ರತಿವಾದಿ 3 ರವರ ಗಂಡ ತುಳೋಜಿ ರಾವ್ ರವರ ಜೊತೆ ಬೆಂಗಳೂರಿಗೆ ಹೋಗಿರುತ್ತೇನೆ ಎಂದರೆ ಸರಿ. ಈಗಲೂ ಬೆಂಗಳೂರಿನಲ್ಲಿ ಇರುತ್ತೇನೆ.

6. ಪ್ರತಿವಾದಿ 3 ರವರ ಗಂಡ ಬೆಂಗಳೂರಿನಲ್ಲಿ ಮರಣ ಹೊಂದಿದ ನಂತರ ಆತನ ಹೆಂಡತಿ ಮಕ್ಕಳಾದ ಪ್ರತಿವಾದಿ 3 ಮತ್ತು ಪ್ರತಿವಾದಿ 3(ಎ) ಮತ್ತು (ಬಿ) ರವರು ಸಾಗರಕ್ಕೆ ವಾಪಸ್ಸು ಬಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ಮತ್ತು ಅವರ ಮಕ್ಕಳು ಈಗಲೂ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

7. ಪ್ರತಿವಾದಿ 4 ರವರು ಮಾತ್ರ ದಾವಾ ಸ್ವತ್ತಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾವು ಬೆಂಗಳೂರಿಗೆ ಹೋಗಿರುತ್ತೇವೆ ಅವರು ಮಾತ್ರ ಇಲ್ಲಿ ಇರುತ್ತಾರೆ ಎಂದು ಸೂಚಿಸಿದರೆ ಸರಿ. ಸುಮಾರು 25 ವರ್ಷಗಳಿಂದ ನಾನು ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ತಾಯಿ ಪ್ರತಿವಾದಿ 4 ರವರ ಜೊತೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ ನಾವು 2 ವರ್ಷಗಳಂತೆ ನಮ್ಮ ತಾಯಿಯನ್ನು ನೊಡಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

8. ನನ್ನ ತಾಯಿ ಕೊನೆ ಬಾರಿಗೆ ನನ್ನ ಜೊತೆ 2 ವರ್ಷ ವಾಸವಾಗಿರುತ್ತಾರೆ. ನಾನು ನಮ್ಮ ತಾಯಿಯನ್ನು ಏಕಾಏಕಿ ಒಂದು ದಿನ ಮಧ್ಯ ರಾತ್ರಿ ಪ್ರತಿವಾದಿ 4 ರವರ ಹತ್ತಿರ ತಂದು ಬಿಟ್ಟಿರುತ್ತೇನೆ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದ ಕರೋನಾ ಸಾಂಕ್ರಮೀಕ ರೋಗ ಇರುವ ಸಂದರ್ಬದಲ್ಲಿ ನನ್ನ ತಾಯಿಯನ್ನು ಪ್ರತಿವಾದಿ 4 ರವರಿಗೆ ಹೇಳಿ ಕರೆದುಕೊಂಡು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

9. ನನ್ನ ತಾಯಿಯ ಕೊರಳಲ್ಲಿ ಆ ಸಂದರ್ಬದಲ್ಲಿ ಒಂದು ಚಿನ್ನದ ಸರ ಇತ್ತು ಎಂದರೆ ಸರಿ. ಸದರಿ ಬಂಗಾರದ ಸರ ನಾನು, ಪ್ರತಿವಾದಿ 2 ಮತ್ತು 5 ರವರು ಇಟ್ಟುಕೊಂಡಿರುತ್ತೇವೆ ಎಂದರೆ ಸರಿ ಅದು ಈಗ ನನ್ನ ಸಹೋದರಿಯಾದ ಪ್ರತಿವಾದಿ 5 ರವರ ಬಳಿ ಇರುತ್ತದೆ.

10. ನಮ್ಮ ತಂದೆಗೆ 1.08 ಗುಂಟೆ ಜಮೀನು ಮಂಜೂರು ಆಗಿರುತ್ತದೆ ಎಂದು ಸೂಚಿಸಿದರೆ ಸರಿ. ಸದರಿ ಜಮೀನಿನಲ್ಲಿ 13x60 ಅಡಿ ಜಾಗವನ್ನು ದೇವೇಂದ್ರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದರೆ ಸಾಕ್ಷಿಯು ಸದರಿ ಜಮೀನು ನನ್ನ ಸಹೋದರನಾದ ಪ್ರತಿವಾದಿ 3 ರವರಿಗೆ ಹೋಗಿದ್ದು ಅದನ್ನು ಪ್ರತಿವಾದಿ 4 ರವರು ಮುಂದೆ ನಿಲ್ಲಿಸಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

11. ಸದರಿ ಜಮೀನನ್ನು ಮಾರಾಟ ಮಾಡುವ ಸಂದರ್ಭದಲ್ಲಿ ದೇವೇಂದ್ರಪ್ಪ ಗೌಡ ಬಿನ್ ಶಿವಪ್ಪ ರವರು ಇದ್ದರು ಎಂದರೆ ಸರಿ. ಸದರಿ ಜಮೀನನ್ನು ದೇವೇಂದ್ರಪ್ಪ ರವರಿಂದ ಹರೀಶ ಬಿನ್ ಡಾಕಪ್ಪ ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಾವು ಸದರಿ ಜಮೀನನ್ನು ನಾನು ಪ್ರತಿವಾದಿ 2, ಪ್ರತಿವಾದಿ 3 ರವರ ಗಂಡ ಮತ್ತು ಪ್ರತಿವಾದಿ 5 ರವರು ಸೇರಿಕೊಂಡು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿ ಬಂದ ಹಣವನ್ನು ನಾವೇ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

12. ಈಗ ದಾವಾ ಆಸ್ತಿಯ ಒಂದು ಭಾಗದಲ್ಲಿ ಹರೀಶ್ ತಂದೆ ಡಾಕಪ್ಪ ರವರು ವಾಸವಾಗಿರುತ್ತಾರೆ ಎಂದು ಸೂಚಿಸಿದರೆ ಸರಿ. ನಾವು ಸದರಿ ಸಂಗತಿಯನ್ನು ವಾದ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ನಾವು ಹರೀಶ ಮತ್ತು ದೇವೇಂದ್ರಪ್ಪ (ಖರೀದಿದಾರರನ್ನು) ರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಾಡಿರಬಹುದು ನನಗೆ ಅಷ್ಟು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

13. ನಾವು ಅವುಗಳಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ಪ್ರತಿವಾದಿ 3 ರವರಿಗೆ ಸೇರಿದ ಜಮೀನು ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಬರುತ್ತದೆ ಎಂದು ಸೂಚಿಸಿದರೆ ಸರಿ.

14. 1992 ನೇ ಸಾಲಿನಲ್ಲಿ ನನ್ನ ತಾಯಿ ಜೀವಿತಾಅವಧಿಯಲ್ಲಿ ನಾನು ನನ್ನ ಸಹೊದರರು ಮತ್ತು ಸಹೋದರಿಯರು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೆ ಎಂದು ನುಡಿಯುತ್ತಾರೆ.

15. ಮೌಖಿಕ ವಿಭಾಗದಲ್ಲಿ ಬಂದ ಶೇರಿನ ಜಮೀನನ್ನು ಮಾರಾಟ ಮಾಡಿ ಬಂದ ಹಣವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 5 ರವರಿಗೆ ನಮ್ಮ ಹಿರಿಯರಲ್ಲಿ ಕೂಡಿಟ್ಟ ಹಣವನ್ನು ವಿಭಾಗ ಮಾಡಿಕೊಳ್ಳುವಾದ ತಮ್ಮ ಶೇರಿನ ಪ್ರತಿಫಲವಾಗಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

16. ನನ್ನ ತಾಯಿ ದಾವಾ ಸ್ವತ್ತನ್ನು ಪ್ರತಿವಾದಿ 4 ರವರ ಹೆಸರಿನಲ್ಲಿ ವರ್ಗಾವಣೆ ಆಗಬೇಕು ಎಂದು ತಹಶೀಲ್ದಾರ್ ರವರ ಕಚೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ7 ರಲ್ಲಿರುವ ಅಂಶಗಳ ಪ್ರಕಾರ ನನ್ನ ತಾಯಿ ಪ್ರತಿವಾದಿ 4 ರವರಿಗೆ ಹಕ್ಕು ಬದಲಾವಣೆ ಮೂಲಕ ವರ್ಗಾಯಿಸಿರುತ್ತಾರೆ ಎಂದು ಸೂಚಿಸಿದರೆ ಸಾಕ್ಷಿಯು ಅದರ ಬಗ್ಗೆ ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

17. ನಾವು ನಿಪಿ7 ರ ದಾಖಲೆಯನ್ನು ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ಅದರ ಬಗ್ಗೆ ನಮಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಮೌಖಿಕವಾಗಿ ವಿಭಾಗ ಮಾಡಿಕೊಂಡು ನಮ್ಮ ಹಕ್ಕನ್ನು ಬಿಟ್ಟುಕೊಟ್ಟ ನಂತರ ನಿಪಿ7 ರಂತೆ ಹಕ್ಕು ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

18. ನನಗೆ ನಿಪಿ7 ರ ದಾಖಲೆಯು ಮೊದಲಿನಿಂದಲೂ ನಮ್ಮ ಗಮನಕ್ಕೆ ಇರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 5 ರವರಿಗೂ ಸಹ ಸದರಿ ನಿಪಿ7 ರ ದಾಖಲೆ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

19. ದಾವಾ ಆಸ್ತಿಯು ಮತ್ತು ಅದರಲ್ಲಿರುವ ಮನೆಯು ಪ್ರತಿವಾದಿ 4 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ, ಸದರಿ ದಾವಾ ಆಸ್ತಿಯು ಮಾರುತಿಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಮ್ಮ ತಂದೆಯ ಕಾಲದಲ್ಲಿ ಅಡಿಕೆ ಸೂರಿನ ಮನೆ ಇತ್ತು ಎಂದು ಸೂಚಿಸಿದರೆ ಸಾಕ್ಷಿಯು ಅದು ವಾಸದ ಮನೆ ಇತ್ತು ಎಂದು ನುಡಿಯುತ್ತಾರೆ.

20. ನನ್ನ ತಂದೆ ಬಟ್ಟೆ ಹೊಲೆಯುವ ಕೆಲಸ ಮಾಡುತ್ತಿದ್ದರು. ಅವರಿಗೆ ಅಷ್ಟೊಂದು ಆದಾಯ ಇರುವುದಿಲ್ಲ ಎಂದರೆ ಸಾಕ್ಷಿಯು ಬಡತನ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಇದ್ದ ಮನೆಯ ತುಂಬಾ ಹಳೆಯ ಮನೆ ಆಗಿತ್ತು ಎಂದರೆ ಸರಿ. ಪ್ರತಿವಾದಿ 4 ರವರ ಹೆಸರಿನಲ್ಲಿ ದಾವಾ ಆಸ್ತಿ ಆದ ನಂತರ ಅದನ್ನು ಪ್ರತಿವಾದಿ 4 ರವರು ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿ.

21. ಸದರಿ ಮನೆಯು ಆರ್.ಸಿ.ಸಿ ಕಟ್ಟಡ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿ 4 ರವರಿಗೆ ದುಡಿಮೆ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಪ್ರತಿವಾದಿ 4 ರವರಿಗೆ ಎರಡು ಜನ

ಹೆಣ್ಣು ಮಕ್ಕಳಿರುತ್ತಾರೆ ಎಂದು ಸೂಚಿಸಿದರೆ ಸರಿ. ಸದರಿ ಇಬ್ಬರು ಹೆಣ್ಣು ಮಕ್ಕಳು ಇಂಜಿನಿಯರಿಂಗ್ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

22. ಪ್ರತಿವಾದಿ 4 ರವರ ಹೆಣ್ಣು ಮಕ್ಕಳು ತಮ್ಮ ದುಡಿಮೆ ಇಂದ ಹಣದಿಂದ ಪ್ರತಿವಾದಿ 4 ರವರು ಆರ್.ಸಿ.ಸಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 4 ರವರು ಮೊದಲು ಬಟ್ಟೆ ಹೋಲೆಯುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

23. ಪ್ರತಿವಾದಿ 4 ರವರಿಗೆ ಇದ್ದಕ್ಕೆ ಇಂದ್ದಂತೆ ಪೋಲಿಯೋ ರೋಗದ ತರ ತನ್ನ ಕೈ ಕಾಲುಗಳು ಸ್ವಾಧೀನವನ್ನು ಕಳೆದುಕೊಂಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ಪ್ರತಿವಾದಿ 4 ರವರಿಗೆ ಅಂಗವಿಕಲ ಮಾಷಾಸನ ಬತ್ಯೆ ಬರುತ್ತಿರುತ್ತದೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿ 4 ರಿಂದ ಹಣವನ್ನು ಪಡೆದುಕೊಂಡು ದಾವಾ ಆಸ್ತಿಯನ್ನು ಪ್ರತಿವಾದಿ 4 ರವರಿಗೆ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿ.

24. ಪ್ರತಿವಾದಿ 4 ರವರು ಸುಳ್ಳು ವರದಿಯನ್ನು ಕೊಟ್ಟು ಖಾತೆ ವರ್ಗಾವಣೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 4 ರವರು ಯಾವತ್ತೂ ಸಹ ದಾವಾ ಆಸ್ತಿಯು ತನಗೆ ಬೇಕು ಎಂದು ಅರ್ಜಿಯನ್ನು ಕೊಟ್ಟಿರುವುದಿಲ್ಲ ಎಂದರೆ ಮೊದಲೇ ಮೂರು ಭಾಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

25. ನಾನು ಬೆಂಗಳೂರಿನಲ್ಲಿ ಗಾರ್ಮೆಂಟ್ಸ ನಲ್ಲಿ ಕೆಲಸ ಮಾಡುತ್ತೇನೆ. ಪ್ರತಿವಾದಿ 4 ರವರು ದಾವಾ ಆಸ್ತಿಯಲ್ಲಿ ಕಟ್ಟಿರುವ ಮನೆಗೆ ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.